ಪ್ರಸ್ತುತ, ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯವರು ಅಫಜಲಪೂರ ತಾಲ್ಲೂಕಿನಲ್ಲಿರುವ ರೈತರ ಪಂಪುಸೆಟ್ಟುಗಳಿಗೆ ಅಗತ್ಯ ವಿದ್ಯುತ್ ಪೂರೈಕೆಗಾಗಿ ಡಿಗ್ಗಿಕ್ರಾಸ್ ಹತ್ತಿರ ಅಳ್ಳಗಿ (ಬಿ) ಗ್ರಾಮದಲ್ಲಿ ಮತ್ತು ಸಾಗನೂರು ಹತ್ತಿರ 33/11 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರಗಳನ್ನು ಸ್ಥಾಪಿಸಲು ದೀನ ದಯಾಳು ಉಪಧ್ಯಾಯ ಗ್ರಾಮಜ್ಯೋತಿ ಯೋಜನೆ (DDUGJY) ಯಡಿ ಆರ್.ಇ.ಸಿ ಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪಶುಸಂಗೋಪನ ಹಾಗೂ ಮುಜರಾಯಿ ಸಚಿವರು) (ಇಂಧನ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಸಂಪೂರ್ಣವಾಗಿ ಒದಗಿಸಲಾಗಿದ್ದು, ಈಗಾಗಲೇ ಸದಸ್ಯರು ನನ್ನೊಂದಿಗೆ ಮಾತನಾಡಿದ್ದಾರೆ. ದೀನ ದಯಾಳು ಉಪಾಧ್ಯಾಯ ಗ್ರಾಮಜ್ಯೋತಿ ಯೋಜನೆ (DDUGJY) ಯು.ಡಿ.ಆರ್.ಇ.ಸಿಗೆ ಪ್ರಸ್ತಾವನೆಯನ್ನು ಸಲ್ಲಿಸಿದೆ. ಇದನ್ನು ತಗಾದೆ ಮಾಡಿ, ಆದಷ್ಟು ಬೇಗ ಮಾಡಿಸುವ ಪ್ರಯತ್ನವನ್ನು ಮಾಡುತ್ತೇವೆ.

ಅಧ್ಯಕ್ಷರು:– ಆದಷ್ಟು ಬೇಗ ಮಂಜೂರು ಮಾಡಿಸುವ ವ್ಯವಸ್ಥೆ ಮಾಡಿ.

7. **ವಿಷಯ: ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಕೆಂಭಾವಿ ಪಟ್ಟಣವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಣೆ ಮಾಡುವ ಬಗ್ಗೆ.**

ಶ್ರೀ ಗುರು ಪಾಟೀಲ ಶಿರವಾಳ (ಶಹಾಪುರ):– ಮಾನ್ಯ ಅಧ್ಯಕ್ಷರೆ, ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಕೆಂಭಾವಿ ಪಟ್ಟಣವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಣೆ ಮಾಡುವಂತೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು):– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು):– ಮಾನ್ಯ ಅಧ್ಯಕ್ಷರೆ, ಯಾವುದೇ ಹೊಸ ತಾಲ್ಲೂಕಿನ ರಚನೆಯ ಬಗ್ಗೆ ಅಧ್ಯಯನ ಮಾಡಿ ವರದಿ ಸಲ್ಲಿಸಲು ಸರ್ಕಾರವು ಸಮಿತಿಗಳನ್ನು ಹಿಂದೆ ರಚಿಸಿರುತ್ತದೆ. ಅದರಂತೆ ಈ ಹಿಂದೆ ವಾಸುದೇವರಾವ್, ಟಿ.ಎಂ. ಹುಂಡೇಕರ, ಶ್ರೀ ಪಿ.ಸಿ. ಗದ್ದಿಗೌಡರ ಮತ್ತು ಎಂ.ಬಿ ಪ್ರಕಾಶ್, ಇವರುಗಳ ನೇತೃತ್ವದ 4 ಸಮಿತಿಗಳು ಹೊಸ ತಾಲ್ಲೂಕಿನ ರಚನೆಯ ಬಗ್ಗೆ ಅಧ್ಯಯನ ಮಾಡಿ/ಪರಿಶೀಲಿಸಿ ನೀಡಿದ ವರದಿಯ ಮೇರೆಗೆ 43 ಹೊಸ ತಾಲ್ಲೂಕುಗಳನ್ನು ರಚನೆ ಮಾಡಲು ಸರ್ಕಾರವು 2013–14ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿರುತ್ತದೆ. ಘೋಷಿಸಿದ 43 ಹೊಸ ತಾಲ್ಲೂಕುಗಳ ರಚನೆಯ ಅನುಷ್ಠಾನಕ್ಕಾಗಿ ಪ್ರಥಮ ಆದ್ಯತೆ ನೀಡಬೇಕಾಗಿರುತ್ತದೆ. ಹೊಸ ತಾಲೂಕಿನ ರಚನೆಯ ಬಗ್ಗೆ ಮುಂದೆ ರಚಿಸಲಾಗುವ ಸಮಿತಿಯ ರಚನೆಯ ನಿರ್ಣಯಕ್ಕೊಳಪಟ್ಟು ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಕೆಂಭಾವಿಯನ್ನು ತಾಲೂಕು ಕೇಂದ್ರವನ್ನಾಗಿ ಮಾಡುವ ಮನವಿಯ ಬಗ್ಗೆ ಪರಿಶೀಲಿಸಲಾಗುವುದು.

ಶ್ರೀ ಗುರು ಪಾಟೀಲ ಶಿರವಾಳ:– ಸಚಿವರು ಕಳುಹಿಸಿರುವ ಉತ್ತರದಲ್ಲಿ 43 ಹೊಸ ತಾಲ್ಲೂಕು ಕೇಂದ್ರ ರಚನೆಯ ಅನುಷ್ಠಾನವನ್ನು ಮೊದಲು ನಾವು ಮಾಡುತ್ತೇವೆ. ತದನಂತರದಲ್ಲಿ ಹೊಸ ತಾಲ್ಲೂಕಿನ ರಚನೆಯನ್ನು ಮುಂದೆ ರಚಿಸಲಾಗುವ ಸಮಿತಿಯ ರಚನೆಯ ನಿರ್ಣಯಕ್ಕೊಳಪಟ್ಟು ಕೆಂಭಾವಿಯನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡುವ ಮನವಿಯ ಬಗ್ಗೆ ಪರಿಶೀಲಿಸಲಾಗುವುದೆಂದು ಹೇಳಿದ್ದಾರೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– 2013–14ನೇ ಸಾಲಿನಲ್ಲಿ ಮುಖ್ಯಮಂತ್ರಿಗಳಾಗಿದ್ದ ಜಗದೀಶ ಶೆಟ್ಟರ್ ರವರು ಮಾಡಿರುವ ಘೋಷಣೆ ಮತ್ತು ನಾಲ್ಕು ಸಮಿತಿಗಳು ಮಾಡಿರುವ ಶಿಫಾರಸ್ಸಿನ ಪ್ರಕಾರ 43 ಹೊಸ ತಾಲ್ಲೂಕುಗಳನ್ನು ಮಾಡಬೇಕೆಂದಿದ್ದಾರೆ, ಅದಕ್ಕೆ ನಾವು ಬದ್ದರಾಗಿದ್ದೇವೆ. ಸದಸ್ಯರು ಪ್ರಸ್ತಾಪ ಮಾಡಿರುವ ವಿಷಯ ನಾಲ್ಕು ಸಮಿತಿಗಳಿಂದ ಬಂದಿಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಈ ಪ್ರಸ್ತಾಪ ನಮ್ಮ ಮುಂದಿನ ಪರಿಶೀಲನೆ ಮಾಡುತ್ತೇವೆ.

ಶ್ರೀ ಗುರು ಪಾಟೀಲ ಶಿರವಾಳ:– ಈ ಸಮಿತಿಗಳ ರಚನೆಯಲ್ಲಿ ಸಾಕಷ್ಟು ಲೋಪದೋಷಗಳಾಗಿವೆ. ಅತ್ಯಾವಶ್ಯಕವಾಗಿ ಕೆಂಭಾವಿಯನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಬೇಕೆಂದು ಜಿಲ್ಲಾಧಿಕಾರಿಗಳು ಒಂದು ವರದಿಯನ್ನು ಕಳುಹಿಸಿದ್ದಾರೆ. ದಯಮಾಡಿ 43ರ ಜೊತೆಗೆ ಇದನ್ನು ಸೇರಿಸಿ.

ಅಧ್ಯಕ್ಷರು:– ಇದನ್ನು ಬೇರೆ ವಿಚಾರದಲ್ಲಿ ಚರ್ಚೆ ಮಾಡಿ. ಇದೆಲ್ಲಾ ಪಾಲಿಸಿ ವಿಷಯವಾಗಿದ್ದು, ನಿರ್ದಿಷ್ಟವಾಗಿ ಮಾಡುತ್ತೇವೆಂಬ ಒಂದು ಬದ್ಧತೆಯ ಮಾತನ್ನು ಹೇಳಿದ್ದಾರೆ, ಸ್ವಲ್ಪ ಕಾಯಬೇಕಾಗುತ್ತದೆ.

ಶ್ರೀ ಕೆ. ಶಿವಮೂರ್ತಿ:– Policy matter ಎಂದು ಹೇಳುತ್ತೀರಿ, ಆದರೆ ಸಮಿತಿಯ ಶಿಫಾರಸ್ಸು ಇಲ್ಲದಿರುವ ಐದನ್ನು ಮಂಜೂರು ಮಾಡಿದ್ದಾರೆ. ಮತ್ಯಾವ ಪಾಲಿಸಿ?

ಅಧ್ಯಕ್ಷರು:– ಮಂಜೂರು ಮಾಡಿದ್ದರೆ ಅವರನ್ನು ಕೇಳಿ ಇಲ್ಲಿ ಅಲ್ಲ.

ಶ್ರೀ ಗುರು ಪಾಟೀಲ ಶಿರವಾಳ:– ಒಟ್ಟಿಗೆ ಸೇರಿಸಿ ಮಾಡಿದರೆ ಒಳ್ಳೆಯದು.

ಅಧ್ಯಕ್ಷರು:– ಕೆ. ಶಿವಮೂರ್ತಿಯವರೆ, ಇದು ರಾಜಕೀಯ ತೀರ್ಮಾನ, ಮಾಡುವುದಕ್ಕೆ ಮನಸ್ಸಿದ್ದರೆ ಇವರು ಮಾಡಬಹುದು. ಇದನ್ನು ತೀರ್ಮಾನ ಮಾಡುವಲ್ಲಿ ಸರ್ಕಾರದ ಬದ್ಧತೆಯಿದೆಯೆಂಬ ಒಂದು ಮಾತನ್ನು ಹೇಳಿದ್ದಾರೆ. ಯಾವಾಗ ಎಂದರೆ ಹಣಕಾಸಿನ ವಿಚಾರದಲ್ಲಿ ಮಾಡಿದ್ದಾರೆ.

ಶ್ರೀ ಕೆ. ಶಿವಮೂರ್ತಿ:– ಏಕೆಂದರೆ ಇದರಲ್ಲಿ ನಮ್ಮ ಬೇಡಿಕೆ ಕೂಡ ಇದೆ. ಇದರ ಜೊತೆಗೆ ನಮ್ಮದನ್ನು ತಾಲ್ಲೂಕು ಕೇಂದ್ರ ಮಾಡಿದರೆ ನಾವು ಕೂಡ ಸ್ವರ್ಗ ಸೇರಿಕೊಳ್ಳುತ್ತೇವೆ.

ಅಧ್ಯಕ್ಷರು:– ನನಗೆ ಉತ್ತರ ಹೇಳುವುದಕ್ಕೆ ಗೊತ್ತಿದೆ. ಕೆಲವರು ಬೇಸರ ಮಾಡಿಕೊಳ್ಳುತ್ತಾರೆಂದು ಹೇಳುವುದಿಲ್ಲ. ಸುಮ್ಮನಿರಿ ಆಗುವುದು ಆಗಿ ಹೋಗಿದೆ, ಮುಂದೆ ಆಗುವ ಬಗ್ಗೆ ಯೋಚನೆ ಮಾಡಿ.

ಶ್ರೀ ಗುರು ಪಾಟೀಲ ಶಿರವಾಳ:– 43 ಹೊಸ ತಾಲ್ಲೂಕುಗಳ ಜೊತೆಗೆ ಇನ್ನಷ್ಟು ಸೇರಿಸಿ ಘೋಷಣೆ ಮಾಡಬೇಕೆಂಬುದು ನನ್ನ ಒತ್ತಾಯವಾಗಿದೆ.

ಅಧ್ಯಕ್ಷರು:– ಇನ್ನೊಂದಿಷ್ಟು ಸೇರಿಸಿಕೊಳ್ಳಿ, ನಮ್ಮ ಊರನ್ನೂ ಕೂಡ ಸೇರಿಸಿಕೊಳ್ಳಿ.

ಶ್ರೀ ಕೆ. ಶಿವಮೂರ್ತಿ:– ಮಾಯಕೊಂಡವನ್ನು ಸೇರಿಸಿಕೊಳ್ಳಬೇಕು.

ಶ್ರೀ ಗುರು ಪಾಟೀಲ ಶಿರವಾಳ:– ದಯಮಾಡಿ ಕೆಂಭಾವಿಯನ್ನು ನೀವು ಘೋಷಣೆ ಮಾಡಲೇಬೇಕು.

8. ವಿಷಯ: ಚನ್ನರಾಯಪಟ್ಟಣ ವಿಧಾನಸಭಾ ಕ್ಷೇತ್ರದ ಕಿರೀಸಾವೆ ದಾಖಲೆ ಗ್ರಾಮದ ದಾಸನ ಕೆರೆಯ ಅರ್ಧಕ್ಕಿಂತ ಹೆಚ್ಚು ಭಾಗವನ್ನು ಒತ್ತುವರಿ ಮಾಡಿಕೊಂಡಿರುವ ಬಗ್ಗೆ.

ಶ್ರೀ ಸಿ.ಎನ್. ಬಾಲಕೃಷ್ಣ (ಶ್ರವಣಬೆಳಗೊಳ):– ಮಾನ್ಯ ಅಧ್ಯಕ್ಷರೆ, ಚನ್ನರಾಯಪಟ್ಟಣ ವಿಧಾನಸಭಾ ಕ್ಷೇತ್ರದ ಕಿರೀಸಾವೆ ದಾಖಲೆ ಗ್ರಾಮದ ದಾಸನ ಕೆರೆಯ ಅರ್ಧಕ್ಕಿಂತ ಹೆಚ್ಚು ಭಾಗವನ್ನು ಕೆಲವು ಒತ್ತುವರಿ ಮಾಡಿದ್ದು, ಇದುವರೆಗೆ ತೆರೆವುಗೊಳಿಸಿಲ್ಲದಿರುವ ವಿಷಯದ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಟ್ಟಿಲ್ಲ ಅದಕ್ಕೋಸ್ಕರ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು):– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿಲ್ಲ. ಸೋಮವಾರ ಕೊಡುತ್ತೇನೆ.

ಶ್ರೀ ಸಿ.ಎನ್. ಬಾಲಕೃಷ್ಣ:– ಜಿಲ್ಲಾಧಿಕಾರಿಗಳಿಗೆ ಕಂದಾಯ ಸಚಿವರು ನಿರ್ದೇಶನ ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಒತ್ತುವರಿಯನ್ನು ಈಗಾಗಲೇ ತೆರೆವುಗೊಳಿಸುತ್ತಿದ್ದೇವೆ. ಈಗ ಪ್ರಸ್ತಾಪ ಮಾಡಿರುವ ವಿಷಯವನ್ನು ಪರಿಶೀಲನೆ ಮಾಡಿ ಕಂದಾಯ ಇಲಾಖೆಗೆ ಆದೇಶ ಕೊಟ್ಟು ಇದರ ಬಗ್ಗೆ ಕೂಡ ವಿಶೇಷವಾಗಿ ಗಮನ ಕೊಟ್ಟು ಒತ್ತುವರಿಯನ್ನು ತೆರೆವುಗೊಳಿಸುತ್ತೇವೆ.

ಅಧ್ಯಕ್ಷರು:– ಈಗ ಪ್ರಕಟಣೆ.